## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ

## ಸಿಸಿ ನಂ**. 288/2020**

ಚಾಸಾ-2 ಫ್ರಾಸಾ-5

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 09-02-2026

| | | |
|---|---|---|
| ಹೆಸರು | : | ಅರವಿಂದ |
| ತಂದೆಯ ಹೆಸರು | : | ಸಿಧ್ರಾಮಯ್ಯ |
| ವಯಸ್ಸು | : | 52 ವರ್ಷ |
| ಉದ್ಯೋಗ | : | ಖಾಸಗಿ ಉದ್ಯೋಗ |
| ವಾಸಸ್ಥಳ | : | ಅಫಜಲಪುರ |

-: ಮುಖ್ಯ ವಿಚಾರಣೆ **:-** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ **:-**

ಚಾಸಾ 1 ಪರಿಚಯ ಇಲ್ಲ.

ಸಾಕ್ಷಿಗೆ ಜಪ್ತಿ ಪಂಚನಾಮೆಯನ್ನು ತೋರಿಸಿದ್ದು ಸಾಕ್ಷಿ ಅದರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು ಜಪ್ತಿ ಪಂಚನಾಮೆಯನ್ನು ಈಗಾಗಲೇ ನಿಪಿ-**3** ಎಂದು ಗುರುತಿಸಲಾಗಿದ್ದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-**3**(ಸಿ) ಎಂದು ಗುರುತಿಸಲಾಯಿತು.

ನಾನು ಒಂದು ದಿನ ಬಸನಿಲ್ದಾಣದಲ್ಲಿ ಕುಳಿತಿದ್ದಾಗ ಪೋಲಿಸರು ನನಗೆ ಕರೆದು ಸಹಿ ಮಾಡು ಎಂದು ಹೇಳಿದ್ದಕ್ಕೆ ಸಹಿ ಮಾಡಿರುತ್ತೇನೆ. ನನಗೆ ಈ ಪ್ರಕರಣದ ಕುರಿತು ಯಾವುದೇ ಮಾಹಿತಿ ಇಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ.

**(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

<u>ಪಾಟೀ ಸವಾಲುಃ ಸ.ಸ.ಅ. ರವರಿಂದ</u>

ದಿಃ 21-04-2020 ರಂದು ಚಾಸಾ 3 ರವರು ನನಗೆ ಕಚೇರಿಗೆ ಕರೆಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಅಫಜಲಪುರ ತಾಲೂಕಿನ ಶಿರವಾಳ ಗ್ರಾಮದ ಬಾಳಪ್ಪ ತಂದೆ ಹಣಮಂತ ಇವರ ಪಾನಶಾಪ ಅಂಗಡಿಯಲ್ಲಿ ಕಳ್ಳಬಟ್ಟಿ ಸಾರಾಯಿ ಸಂಗ್ರಹಿಸಿ ಮಾರಾಟ ಮಾಡುತ್ತಿದ್ದಾರೆ ಎಂಬ ಭಾತ್ಮಿ ಬಂದ ಮೇರೆಗೆ ಚಾಸಾ 3 ರವರು ನಮಗೆ ಕರೆಯಿಸಿ ಪಂಚರಾಗಿ ಸಹಕರಿಸಬೇಕೆಂದು ಕೇಳಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾವು ಭಾತ್ಮಿ ಸ್ಥಳಕ್ಕೆ ಹೋಗಿ ಅಲ್ಲಿ ನಂತರ ಸ್ಥಳದಲ್ಲಿ ಶೋದನೆ ಸಮುಚ್ಚಿತ ತಯಾರಿಸಿ ನಮ್ಮ ಸಮಕ್ಷಮ ಪಾನಶಾಪ ತಪಾಸಣೆ ಮಾಡಿ ನೋಡಿದಾಗ ಪಾನಶಾಪ ಒಳಗಡೆ ಒಂದು ಕಟ್ಟಿಗೆ ಪೆಟ್ಟಿಗೆ ಇದ್ದು ಅದರಲ್ಲಿ ಒಂದು ಲೀಟರಿನ 3 ಬಾಟಲಿಗಳು ಇದ್ದು ನಮ್ಮ ಸಮಕ್ಷಮ ಅವುಗಳ ಮುಚ್ಚಳ ತೆಗೆದು ನೋಡಿದಾಗ ಅವುಗಳಲ್ಲಿ ಕಳ್ಳಬಟ್ಟಿ ಸಾರಾಯಿ ಇರುವುದು ಕಂಡುಬಂದಿರುತ್ತದೆ ಎಂದರೆ ಸರಿಯಲ್ಲ. ನಂತರ ಸ್ಥಳ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದೊರೆತ 3 ಬಾಟಲಿಗಳಿಂದ ಒಟ್ಟು 180 ML ನಷ್ಟು ಕಳ್ಳಬಟ್ಟಿ ಸಾರಾಯಿ ರಾಸಾಯನಿಕ ಪರೀಕ್ಷೆಗಾಗಿ ಮಾದರಿ ಶಾಂಪಲ ಅಂತ ತೆಗೆಯಲಾಯಿತು ಎಂದರೆ ನನಗೆ ಗೊತ್ತಿಲ್ಲ. ನಂತರ ಸ್ಥಳದಲ್ಲಿ ಮಾದರಿ ಮುದ್ರೆ ತಯಾರಿಸಲಾಯಿತು ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ **D.K.** ವಕೀಲರಿಂದಃ-</u>

ಪಾಟೀಸವಾಲು ಇಲ್ಲ ಎಂದು ನುಡಿಯುತ್ತಾರೆ.

<u>ಮರು ವಿಚಾರಣೆಃ - ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ